Indian Journal of History and Archaeology

ISSN (E):2582-225X
VOL-2, ISSUE -3,SEPTEMBER-OCTOBER, 2020, 67-77

# ಜಾತಿ ಪದ್ಧತಿ ಕುರಿತ ಅಂಬೇಡ್ಕರ್ ಚಿಂತನೆಗಳು

*ಪರಿಮಳ ಎಸ್.ಬಿ
**ಡಾ.ಬಿ.ಎನ್.ಯಶೋದ

**ಪರಿಮಳ.ಎಸ್.ಬಿ**
ಸಂಶೋಧಕರು
ಡಾ.ಬಿ.ಆರ್.ಅಂಬೇಡ್ಕರ್
ಸಂಶೋಧನ ಹಾಗು ವಿಸ್ತರಣ
ಕೇಂದ್ರ,ಮೈಸೂರು
ವಿಶ್ವವಿದ್ಯಾಲಯ
ಮಾನಸಗಂಗೋತ್ರಿ, ಮೈಸೂರು
**ಡಾ.ಬಿ.ಎನ್.ಯಶೋದ**
ಮಾರ್ಗದರ್ಶಕರು
/ಪ್ರಾಂಶುಪಾಲರು
ಯುವರಾಜ ಕಾಲೇಜು
ಮೈಸೂರು ವಿಶ್ವವಿದ್ಯಾಲಯ,
ಮೈಸೂರು

ಭಾರತೀಯ ಹಿಂದೂ ಧರ್ಮದಲ್ಲಿ ಜಾತೀಯತೆ ಎಂಬುದು ಪ್ರಸ್ತುತ ಒಂದು ಬಹುದೊಡ್ಡ ಕ್ರಾಂತಿಕಾರವಾದ ಬೆಳವಣಿಗೆಯ ಸ್ವರೂಪವನ್ನು ಪಡೆದುಕೊಂಡಿದೆ. ಜಾತಿ ವ್ಯವಸ್ಥೆ ಎಂಬುದು ರೋಗಗ್ರಸ್ಥ ಸಮಾಜದ ಹುಟ್ಟಿನ ಮೂಲವಾಗಿದೆ. ಹಿಂದೂಧರ್ಮದ ಚಾತುರ್ವರ್ಣ ಪದ್ಧತಿಯಿಂದ ಉಗಮಗೊಂಡ ವರ್ಗ ಸಂಘರ್ಷದಲ್ಲಿ ಈ ರಾಷ್ಟ್ರದ ತಳಸಮುದಾಯಗಳು ಬಲಿಪಶುಗಳಾಗಿ ಜಾತಿ ಪದ್ಧತಿಯ ಸಂಕೋಲೆಯಲ್ಲಿ ಸಿಲುಕಿ ಮಾನವನ ಶ್ರೇಯೋಭಿವೃದ್ಧಿಗೆ ಪೂರಕವಾಗದೇ ಮಾರಕವಾಗಿ ಪರಿಣಮಿಸಿ ಸಾಮಾಜಿಕ ನೆಲೆಯನ್ನು ಕಳೆದುಕೊಂಡಿರುತ್ತವೆ. ಮನುಷ್ಯ ಮನುಷ್ಯನನ್ನು ಸ್ಪರ್ಶಿಸದೇ ಅಮಾನವೀಯತೆಯನ್ನು ತೆರದಿಟ್ಟವೆ. ಇಂತಹ ಜಾತಿ ಪದ್ಧತಿಗೆ ಹಲವಾರು ದುಷ್ಟಶಕ್ತಿಗಳು ತಮಗೆ ತಿಳಿದೋ ತಿಳಿಯದೋ ತಮ್ಮ ಹಿತಾಸಕ್ತಿಗೆ ಧಕ್ಕೆ ಬಾರದಂತೆ ನಿರಂಕುಶತೆಯನ್ನು ಬೆಳಸುವಲ್ಲಿ ಸಫಲರಾಗಿದ್ದಾರೆ. ಈ ರೀತಿಯ ಬೆಳವಣಿಗೆಯ ಪರಿಣಾಮದಿಂದಾಗಿ ಭಾರತದಲ್ಲಿ ಬುದ್ಧ, ಬಸವ, ಮಹಾತ್ಮ ಜ್ಯೋತಿಬಾ ಫುಲೆ, ಕಬೀರ, ನಾರಾಯಣಗುರು, ಶಾಹುಮಹರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್, ಗೋಪಾಲ ಸ್ವಾಮಿ ಅಯ್ಯಾರ್, ಕುದ್ಮಲ್ ರಂಗರಾವ್, ಡಾ.ಬಿ.ಆರ್.ಅಂಬೇಡ್ಕರ್ ಅವರಂಥ ಸಮಾಜ ಸುಧಾರಕರು ಈ ಭಾರತ ದೇಶದಲ್ಲಿ ಹುಟ್ಟಬೇಕಾಯಿತು. ಇಂಥ ಮಹಾನ್ ಸಮಾಜ ಪರಿವರ್ತಕರ ಸುಧಾರಣೆಗಳು, ಬೋಧನೆಗಳು, ವೈಜ್ಞಾನಿಕ ಚಿಂತನೆಗಳು ಜಾತಿ ವಿನಾಶಕ್ಕೆ ಮುನ್ನುಡಿ ಬರೆದವು. ಆದರೂ ಸಹ ಜಾತಿ ಪದ್ಧತಿಯನ್ನು ಬೇರು ಸಮೇತ ಕಿತ್ತೊಗೆಯಲಾಗಲಿಲ್ಲ. ಶತಶತಮಾನಗಳಿಂದ ಜಾತಿ ಪದ್ಧತಿಯಿಂದಾಗಿ ನಿಮ್ನವರ್ಗಗಳು ಸಾಮಾಜಿಕ,

ಆರ್ಥಿಕ, ರಾಜಕೀಯ, ಶೈಕ್ಷಣಿಕ ಸ್ವಾತಂತ್ರ್ಯಗಳಿಂದ ವಂಚಿತರಾಗಿ ಸಂಕೋಲೆಯಲ್ಲಿಯೇ ಸಿಲುಕಿ ಬದುಕುತಿದ್ದಾರೆ. ಪುರೋಹಿತಶಾಹಿ ಧರ್ಮದಲ್ಲಿರುವ ಅಸ್ಪೃಶ್ಯತೆ ಎಂಬ ಅಮಾನುಷ ಪದ್ಧತಿಯಿಂದಾಗಿ ನಿಮ್ನವರ್ಗಗಳ ಸ್ಥಿತಿಗತಿಗಳು ಮತ್ತಷ್ಟೂ ದುಸ್ಥಿತಿಗೆ ತಳಕುಹಾಕಿ ಕೊಂಡಿವೆ. ಅದುದ್ದರಿಂದ ಶೂದ್ರ ಸಮುದಾಯಗಳು ತಮ್ಮ ಅಸ್ಮಿತೆ ಮತ್ತು ಅಸ್ಥಿತ್ವಕ್ಕಾಗಿ ನಿರಂತರವಾದ ಹೋರಾಟವನ್ನು ನಡೆಸುತ್ತಿರುವುದು ಗಮನಾರ್ಹವಾದ ಸಂಗತಿಯೇ ಆಗಿರುತ್ತದೆ.

ಭಾರತೀಯ ಸಂದರ್ಭದ ಹಿಂದೂ ಪುರೋಹಿತಶಾಹಿಯ ಸಾಮಾಜಿಕ ಶ್ರೇಣಿಕೃತ ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷೇತ್ರಿಯ, ವೈಶ್ಯ, ಶೂದ್ರ. ಇವರಲ್ಲಿ ಅತ್ಯಂತ ತಳವರ್ಗವೇ ಅಸ್ಪೃಶ್ಯರು. ಅಂದರೆ, ವರ್ಣ ವ್ಯವಸ್ಥೆಯಿಂದಲೇ ಅಸ್ಪೃಶ್ಯರು ಪ್ರತ್ಯೇಕವಾಗಿಯೇ ಇದ್ದಾರೆ ಎಂಬುದು ಈ ಆಧಾರದಿಂದಲೇ ದೃಢಪಡಿಸಬಹುದು. ಹಿಂದೂ ಸವರ್ಣೀಯರು ಸಮುದಾಯಗಳನ್ನು ಅಸ್ಪೃಶ್ಯರೆಂದು ಪರಿಗಣಿಸುವುದಲ್ಲದೆ. ವಿದೇಶಿಯರು ಭಾರತಕ್ಕೆ ಬಂದು ತಮ್ಮ ರಾಜಾಧಿಪತ್ಯ ಸ್ಥಾಪಿಸಿ, ಸರಿಸುಮಾರು ಎರಡು ಶತಮಾನಗಳ್ ಕಾಲ ಆಳ್ವಿಕೆ ಮಾಡಿ ಕೊನೆಗೆ ಭಾರತ ದೇಶಕ್ಕೆ ಅಧಿಕಾರ ಹಸ್ತಾಂತರಿಸುವ ಕಾಲವರೆಗೆ (ಸಂವಿಧಾನವನ್ನು ಅಂಗೀಕರಿಸುವ ಪೂರ್ವದವರೆಗೆ) ಈ ತಳಸಮುದಾಯಗಳನ್ನು ಮುಖ್ಯವಾಗಿ ಮುಟ್ಟದರೆ ಮೈಲಿಗೆ ಎಂದು ಸಮೀಪಿದಲ್ಲಿ ನಿಲ್ಲದವರು ಮತ್ತು ನೋಡಿದರೆ ಪಾಪ ಸುತ್ತಿಕೊಳ್ಳುತ್ತದೆ ಎನ್ನುವವರು. ಪ್ರತಿಶತ 25ರ ಜನಸಂಖ್ಯೆಯುಳ್ಳ ಅಸ್ಪೃಶ್ಯರು; ದಬ್ಬಾಳಿಕೆ, ದೌರ್ಜನ್ಯ, ಸಾಮಾಜಿಕ ಅಸಮಾನತೆ, ಅತಂತ್ರ ಸ್ಥಿತಿಯಲ್ಲಿ ಬದುಕನ್ನು ಸಾಗಿಸುತ್ತಿದ್ದರು. ಈ ಜನಸಮುದಾಯಕ್ಕೆ ರಾಷ್ಟ್ರಾದಾದ್ಯಂತ ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗಿದೆ. ಈ ಹೆಸರುಗಳು ಪ್ರದೇಶದಿಂದ ಪ್ರದೇಶಕ್ಕೆ, ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುವುದನ್ನು ಕಾಣಬಹುದಾಗಿದೆ. ಜಾತಿ ಹೊರಗಿನವರು ಅಸ್ಪೃಶ್ಯರು, ಪಂಚಮರು, ಶೂದ್ರ, ಅತಿಶೂದ್ರರು, ಅವರ್ಣೀಯರು, ಅಂತ್ಯಜರು, ನಾಮಶೂದ್ರ. ಹೀಗೆ ಅನೇಕ ಹೆಸರುಗಳಿಂದ ಕರೆಯಲಾಗುತಿತ್ತು. ಇವರೆಲ್ಲರ ಸಾಮಾಜಿಕ ಸ್ಥಿತಿಗತಿಗಳು ಮಾತ್ರ ಬಹುತೇಕ ಒಂದೇ ರೀತಿಯಲ್ಲಿ ಕಂಡುಬರುತ್ತವೆ. ಈ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ವರ್ಗಗಳ ನಾಯಕತ್ವವನ್ನು ವಹಿಸಿಕೊಂಡರು. ಜೊತೆಗೆ ತಮ್ಮ ಜೀವಿತಾವಧಿಯನ್ನು ಈ ವರ್ಗಗಳ ವಿಮೋಚನಾ ಹೋರಾಟಕ್ಕೆ ನಾಂದಿಯಾಗಿಯೇ ಇಟ್ಟರು. ಅಸ್ಪೃಶ್ಯ ಸಮಸ್ಯೆಯ ಹುಟ್ಟು ಮತ್ತು ಬೆಳವಣಿಗೆ ಕುರಿತು ನಿರಂತರ ಅಧ್ಯಯನ ಶೀಲರಾದ ಡಾ.ಬಿ..ಆರ್.ಅಂಬೇಡ್ಕರ್ ಅವರು ಈ ರಾಷ್ಟ್ರದ ಜಾತಿ ವ್ಯವಸ್ಥೆಯಿಂದ ನಿರ್ಮಾಣವಾಗಿರುವ ಅಸಮಾನತೆ, ದಬ್ಬಾಳಿಕೆ, ದೌರ್ಜನ್ಯ, ಅಸಂವಿಧಾನಿಕ ಆಚರಣೆ, ಅನ್ಯಾಯಗಳನ್ನು ಸಾಕ್ಷಿ ಸಮೇತ ಸಮಾಜಕ್ಕೆ ರುಜುವಾತು ಪಡಿಸಿದರು. ನಿಮ್ನವರ್ಗಗಳ ಧ್ವನಿಯಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತದ ಜಾತಿ ಪದ್ಧತಿಯನ್ನು ವಿಶ್ಲೇಷಿಸುತ್ತಾ; “ಜಾತಿಯಿಂದಾಗಿ

ಹಿಂದೂಗಳ ನೈತಿಕತೆ ಶೋಚನೀಯ ಅವಸ್ಥೆಗೆ ಮುಟ್ಟಿದೆ. ಜಾತಿ ಸಾರ್ವಜನಿಕ ಭಾವನೆಯನ್ನು ನಾಶಗೊಳಿಸಿ, ಹೃದಯ ವೈಶಾಲ್ಯವನ್ನು ಹಾಳುಮಾಡಿದೆ; ಸಾರ್ವಜನಿಕ ಅಭಿಪ್ರಾಯಗಳಿಗೆ ಅವಕಾಶವಿಲ್ಲದಂತೆ ಮಾಡಿದೆ. ಹಿಂದೂವಿನ ಸಮಾಜ ಹಾಗೂ ಹೊಣೆಗಾರಿಕೆ ಅವನ ಜಾತಿಗೆ ಸೀಮಿತವಾದುದು.ಅವನ ನಿಷ್ಠೆ ಜಾತಿಗೆ ಪರಿಮಿತವಾಗಿದೆ. ಸದ್ಗುಣ ಹಾಗೂ ನೀತಿ ಎರಡೂ ಜಾತೀಯತೆಯ ಮುಷ್ಟಿಯಲ್ಲಿ ಸಿಕ್ಕಿಕೊಂಡಿದೆ. ಸಹಾನುಭೂತಿ ಯಾರಿಗೆ ಅವಶ್ಯಕವೋ ಅವನಿಗೆ ಅದು ಸಿಕ್ಕುತ್ತಿಲ್ಲ. ಶ್ಲಾಘನೆ ದೊರೆಯಬೇಕಾದವರಿಗೆ ಅದು ದೊರೆಯುತ್ತಿಲ್ಲ. ದಾನಧರ್ಮ ಬೇಡುವವರಿದ್ದಾರೆ, ಅವರಿಗೆ ಕೊಡುವವರು ಇಲ್ಲ, ಸಂಕಷ್ಟಗಳನ್ನು ಕೇಳುವವರಿಲ್ಲ. ದಯೆದಾನ ಇಲ್ಲವೆಂದೇನೂ ಅಲ್ಲ. ಆದರೆ ಅದು ಜಾತಿಯನ್ನು ದಾಟಿ ಹೋಗಲಾರದು. ಸಹಾನುಭೂತಿ ತಮ್ಮ ಜಾತಿಯವರಿಗೆ ಮಾತ್ರ ಉಂಟು, ಇತರರಿಗೆ ಇಲ್ಲ. ಸದ್ಗುಣಿಯಾದ ಮಹಾಪುರುಷನು ನೇಕಾರನಾಗಿ ಬಂದರೆ ಹಿಂದೂವು ಅವನನ್ನು ಅನುಸರಿಸುವನೆ? ಆತನು ಮಹಾತ್ಮನೇ ಆಗಲಿ, ಅವನನ್ನು ಮುಂದಾಳೆಂದು ಒಪ್ಪಿಕೊಳ್ಳಬೇಕಾದರೆ ಅವನು ತಮ್ಮ ಜಾತಿಯವನೇ ಆಗಿರತಕ್ಕದ್ದು. ಮುಂದಾಳು ಬ್ರಾಹ್ಮಣನಾಗಿದ್ದರೆ ಮಾತ್ರ ಬ್ರಾಹ್ಮಣರು ಅವನ ಅನುಯಾಯಿಯಾಗುತ್ತಾರೆ. ಕ್ಷತ್ರಿಯರು ಮುಂದಾಳಾದರೆ ಮಾತ್ರ ಕ್ಷತ್ರಿಯರು ಅವನ ಅನುಯಾಯಿಗಳಾಗುತ್ತಾರೆ. ಇತರ ಜಾತಿಗಳಿಗೂ ಈ ಮಾತು ಹೀಗೆಯೇ ಅನ್ವಯಿಸುತ್ತದೆ. ಒಬ್ಬ ಮನುಷ್ಯನ ಜಾತಿ ಯಾವುದೇ ಇರಲಿ ಅವನ ಯೋಗ್ಯತೆಯನ್ನು ಪರಿಗಣಿಸಬೇಕೆಂಬ ಬುದ್ಧಿ ಅಥವಾ ಹಾಗೆ ಮಾಡುವ ಧೈರ್ಯ ಹಿಂದೂವಿಗೆ ಇಲ್ಲ. ತಮ್ಮ ಜಾತಿಯವನಾದರೆ ಮಾತ್ರ ಅವನನ್ನು ಪರಿಗಣಿಸುತ್ತಾನೆ. ಅನಾಗರಿಕ ಜನರ ಗುಂಪಿನ ನೀತಿ ಎಷ್ಟು ಸಂಕುಚಿತವೋ ಅಷ್ಟು ಸಂಕುಚಿತವಾಗಿದೆ ಜಾತಿಯ ನೀತಿ. ಸರಿಯಿರಲಿ, ತಪ್ಪಿರಲಿ ತನ್ನ ಜಾತಿ ಮುಖ್ಯ. ಸಜ್ಜನನಿರಲಿ, ದುರ್ಜನನಿರಲಿ ತಮ್ಮ ಜಾತಿಯವನೆನ್ನುವುದೇ ಮುಖ್ಯ. ಹೀಗೆ ತಮ್ಮ ತಮ್ಮ ಜಾತಿಯ ಹಿತವನ್ನೇ ನೋಡಿಕೊಳ್ಳುತ್ತ ಹಿಂದೂಗಳು ದೇಶಕ್ಕೆ ದ್ರೋಹ ಬಗೆದಿಲ್ಲವೆ?" ಎಂದು ಪ್ರಶ್ನಿಸುತ್ತಾರೆ. ಮುಂದುವರಿದು "ಅಸ್ಪೃಶ್ಯತೆಯ ಮೂಲವು ಜಾತಿ ವ್ಯವಸ್ಥೆಯಲ್ಲಿದೆ. ಜಾತಿ ವ್ಯವಸ್ಥೆಯ ಮೂಲವು ವರ್ಣಾಶ್ರಮವು ಧರ್ಮದಲ್ಲಿದೆ; ಮತ್ತು ವರ್ಣಾಶ್ರಮದ ಮೂಲವು ಬ್ರಾಹ್ಮಣ ಧರ್ಮದಲ್ಲಿದೆ; ಮತ್ತು ಬ್ರಾಹ್ಮಣ ಧರ್ಮದ ಮೂಲವು ಸರ್ವಾಧಿಕಾರದಲ್ಲಿದೆ ಅಥವಾ ರಾಜಕೀಯ ಅಧಿಕಾರದಲ್ಲಿದೆ". ಎಂದು ವರ್ಣ ವ್ಯವಸ್ಥೆ ಉಂಟು ಮಾಡಿರುವ ಅಸಮಾನತೆಯನ್ನು ಸಮಾಜದ ಮುಂದಿಟ್ಟರು.

ಮನುಧರ್ಮಶಾಸ್ತ್ರದ ಒಳಮರ್ಮವನ್ನು ತೆರೆದು ತೋರಿಸುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತೀಯ ಜಾತಿ ವ್ಯವಸ್ಥೆಯ ಇತಿಹಾಸವನ್ನು ಕುರಿತು ನೇರವಾಗಿ ತಮ್ಮೆಲ್ಲ ಪ್ರತಿರೋಧದ ಆಲೋಚನೆಗಳನ್ನು ಮಂಡಿಸಿದ್ದು ಎಂದರೆ ಉತ್ಪ್ರೇಕ್ಷೆಯಲ್ಲ. ಅವರ ಹೋರಾಟದ ದಿನಗಳಲ್ಲಿ ಅವರಿಗೆ ಭಾರತ ದೇಶದ ಸ್ವಾತಂತ್ರ್ಯ ಎಷ್ಟು ಮುಖ್ಯವಾಗಿತ್ತೋ ಹಾಗೇ ಶತಶತಮಾನಗಳಿಂದ ಶೋಷಣೆಗೆ ಒಳಗಾದ

ನಿಮ್ನವರ್ಗದ ಕೋಟ್ಯಾಂತರ ಜನರ ಸ್ವಾತಂತ್ರ್ಯ ಸಮಾನತೆಯೂ ಕೂಡ ಅಷ್ಟೇ ಮುಖ್ಯವಾಗಿತ್ತು. ಈ ತಳಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಕ್ಕುಗಳನ್ನು ಶಾಶ್ವತವಾಗಿಯೇ ದೊರಕಿಸಿಕೊಡುವಲ್ಲಿ ಒಂದು ಕ್ರಾಂತಿಕಾರಕವಾದ ಪ್ರಜಾಸತ್ತಾತ್ಮಕ ಮಾದರಿಯ ಹೋರಾಟವನ್ನು ಮಾಡಬೇಕಾಯಿತು. ಅನಂತರದ ದಿನಗಳಲ್ಲಿ ತಮ್ಮ ಸೂಕ್ಷ್ಮ ಚಿಂತನೆಯ ಮೂಲಕ ಈ ನಿಮ್ನವರ್ಗಗಳಿಗೆ ಸಂವಿಧಾನಾತ್ಮಕವಾಗಿ ರಾಜಕೀಯದಲ್ಲಿ, ಉದ್ಯೋಗದಲ್ಲಿ ಮೀಸಲಾತಿಯನ್ನು ಕಲ್ಪಿಸಿಕೊಡುವ ಮೂಲಕ ದಲಿತರಲ್ಲಿ ಕಾಣದಾಗಿದ್ದ ಸ್ವಾಭಿಮಾನ, ಆತ್ಮಗೌರವವನ್ನು ತಂದು ಕೊಡುವಲ್ಲಿ ಯಶಸ್ವಿಯಾದರು. ಈ ಹಿನ್ನಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಮಂಡಿಸಿದಂತಹ ಸಂವಿಧಾನವು ಹಿಂದೂ ಸಾಮ್ರಾಜ್ಯಶಾಹಿಯ ಧಾರ್ಮಿಕ ಆಧಿಪತ್ಯಕ್ಕೆ ಪ್ರತಿರೋಧವಾಗಿ ನೀಡಿದಂತಹ ಮಾನವೀಯತೆಯ ಉತ್ತರವಾಗಿದೆ. ಇದು ಮಾತ್ರವಲ್ಲದೆ ತಳ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತಂದು ಅವರಿಗೆ ಸಲ್ಲಬೇಕಾದ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡುವುದು ಸಹ ಅವರ ಹೋರಾಟದ ಮುಖ್ಯ ಗುರಿಯಾಗಿತ್ತು. ಅಂಬೇಡ್ಕರ್ ಅವರು ತಮ್ಮ ವಿಮೋಚನಾ ಹೋರಾಟದ ಸಂದರ್ಭದಲ್ಲಿ ಅಸ್ಪೃಶ್ಯ ಜನವರ್ಗಗಳನ್ನು ನಿಮ್ನವರ್ಗಗಳೆಂದು ಪರಿಗಣಿಸಿ ಈ ವರ್ಗಗಳ ಸಬಲೀಕರಣಕ್ಕಾಗಿ ಪ್ರತ್ಯೇಕವಾದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಹಕ್ಕುಗಳಗಾಗಿ ಹೋರಾಟ ಮಾಡಬೇಕಾಯಿತು.

ಅಸ್ಪೃಶ್ಯರ ಇಂದಿನ ಸ್ಥಿತಿಗೆ ಹಿಂದೂ ಧರ್ಮಶಾಸ್ತ್ರದ ಮನುಸ್ಮೃತಿಯೇ ಪ್ರಮುಖವಾದ ಕಾರಣ ಎಂದು ಅದನ್ನು ಬಹಿರಂಗವಾಗಿ ಸುಡುವುದರ ಮೂಲಕ ಹಿಂದೂ ಧರ್ಮದ ಅನಾಚಾರಗಳ ಮೇಲೆ ನೇರವಾಗಿಯೇ ಸಮರ ಸಾರಿದರು. ದೇವಾಲಯ ಪ್ರವೇಶ, ಕೆರೆ ನೀರಿನ ಹಕ್ಕಿಗಾಗಿ ಹೋರಾಟ. ಹೀಗೆ ಎಲ್ಲೆಲ್ಲ ಅಸ್ಪೃಶ್ಯರಿಗೆ ಪ್ರವೇಶ ನಿಷೇಧಿಸಲಾಗಿತ್ತೋ ಆ ಎಲ್ಲ ಅಂಶಗಳ ವಿರುದ್ಧ ಪ್ರಬಲಬಾದಂಥ ಒಂದು ಬಹುದೊಡ್ಡ ಹೋರಾಟವನ್ನೇ ಆರಂಭಿಸಿದರು. ಆದರೆ ಅದು ಹಿಂದೂ ವೈದಿಕಶಾಹಿಯ ಅಡಿಯಲ್ಲಿ ಅಸಾಧ್ಯವೆಂದು ತಿಳಿದು ಈ ಸಮುದಾಯಗಳ ಸಬಲೀಕರಣಕ್ಕೆ "ಶಿಕ್ಷಣ, ಸಂಘಟನೆ, ಹೋರಾಟ"ಎಂಬ ತ್ರಿರತ್ನಗಳನ್ನು ಬೋಧಿಸಿ ಆ ಮುಖೇನ ಅಸ್ಪೃಶ್ಯರ ಬೆಳವಣಿಗೆ ಶ್ರಮಿಸಿದರು. "ದಲಿತರಿಗೆ ವಿಮೋಚನೆಯ ನಿಶ್ಚಿತ ಮಾರ್ಗವಿರುವುದು ಉನ್ನತ ವ್ಯಾಸಂಗದಲ್ಲಿ, ಉನ್ನತ ಉದ್ಯೋಗ ಅವಕಾಶಗಳಲ್ಲಿ ಹಾಗೂ ಉತ್ತಮವಾದ ಬದುಕುವ ಮಾರ್ಗದಲ್ಲಿ. ಸಾಮಾಜಿಕ ಜೀವನದಲ್ಲಿ ಅವರು ಉತ್ತಮ ಸ್ಥಾನವನ್ನು ಪಡೆದುಕೊಂಡರೆ ಅವರು ಗೌರವಾನ್ವಿತರೆನಿಸಿಕೊಳ್ಳುತ್ತಾರೆ. ಅಸ್ಪೃಶ್ಯರಿಗೆ ವಿಮೋಚನೆಯ ದಾರಿ ತೋರಿಸಿದ ಡಾ.ಬಿ.ಆರಂಬೇಡ್ಕರ್ ಅವರು ಅಂದು ರಾಷ್ಟ್ರೀಯ ಚಳುವಳಿಯ ಹೆಸರಿನಲ್ಲಿ ವಸಾಹತುಶಾಹಿ ವಿರುದ್ಧ ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿಯೇ ಇವರು ತಾನು ಅನುಭವಿಸಿದ ಮತ್ತು ತನ್ನ ಸಮಾಜವು ಶತಶತಮಾನಗಳಿಂದ ಅನುಭವಿಸಿದಂತ ಅಸ್ಪೃಶ್ಯತೆಯ ವಿಮೋಚನೆಗೆ ಪ್ರಥಮ ಆದ್ಯತೆ ನೀಡಿದರು. ಅಲ್ಲದೆ ಸಾಮಾಜಿಕ

ಸಂಘಟನೆಯ ಬೆಂಬಲವಿಲ್ಲದೆ ರಾಜಕೀಯ ಸಂಘಟನೆ ಬಹುಕಾಲ ಬಾಳುವುದಿಲ್ಲವೆಂಬುದನ್ನು ಬಾಬಾ ಸಾಹೇಬರು ಅರಿತಿದ್ದರು.

ಅಲ್ಲದೆ ಅಸ್ಪೃಶ್ಯತೆಯ ಸಮಸ್ಯೆಯ ಬಗೆಗೆ ಮತ್ತು ಅಸ್ಪೃಶ್ಯತೆ ಎಂಬುದು ಆ ವರ್ಗವನ್ನು ಹೇಗೆ ಭಾದಿಸಿದೆ ಎಂಬುದನ್ನು ಬ್ರಿಟಿಷ್ ಸರ್ಕಾರದ ಸೌತ್‌ಬರೋ ಸಮಿತಿಯ ಮುಂದೆ ವಾದವನ್ನು ಮಂಡಿಸಿ ಅಸ್ಪೃಶ್ಯತೆಯ ಸಮಸ್ಯೆ ಮತ್ತು ಶೋಷಿತ ವರ್ಗಗಳ ನೈಜ ಬವಣೆಯನ್ನು ವಿಶ್ವಕ್ಕೆ ತಿಳಿಸಿ ಕೊಟ್ಟರು. ತರುವಾಯ ಅಸ್ಪೃಶ್ಯರ ರಾಜಕೀಯ ಹಕ್ಕುಗಳಿಗಾಗಿ ಸೈಮನ್ ಕಮಿಷನ್ ಮುಂದೆ ವಾದ ಮಂಡಿಸುತ್ತಾರೆ. ಆ ಮೂಲಕ ಇಂಗ್ಲೇಂಡ್‌ನಲ್ಲಿ ನಡೆದ ದುಂಡು ಮೇಜಿನ ಪರಿಷತ್ತುಗಳಲ್ಲಿ ಭಾಗವಹಿಸಿ "ನಾನು ನಿಮ್ಮ ಮುಂದಿಡಬೇಕಾದ ಮೊದಲನೆಯ ಅಂಶವೊಂದಕ್ಕೆ ನಾನು ಹಿಂದೂಗಳಿಂದ ಬೇರೆಯೇ ಆದ ಅಲ್ಪಸಂಖ್ಯಾತರು ಎಂದು ನಮ್ಮನ್ನು ಪರಿಗಣಿಸಬೇಕೆಂದು ಕೇಳುತ್ತಿದ್ದೇನೆ. ನಮ್ಮನ್ನು ಹಿಂದೂ ಸ್ವರೂಪದಲ್ಲಿ ಮರೆಮಾಚಿದಂತಾಗಿದೆ.ಆದರೆ, ವಾಸ್ತವವಾಗಿ ಹಿಂದೂ ಧರ್ಮದವರಿಗೂ ನಿಮ್ನ ವರ್ಗದವರಿಗೂ ಸಂಬಂಧವೇ ಇಲ್ಲ. ಆದ್ದರಿಂದ ನಾನು ಈ ಸಮ್ಮೇಳನದ ಮುಂದೆ ಒತ್ತಿ ಹೇಳಬೇಕೆಂದಿರುವ ಮೊದಲನೆಯ ವಿಷಯವೆಂದರೆ, ನಮ್ಮನ್ನು ಪ್ರತ್ಯೇಕವಾದ ಮತ್ತು ಅಲ್ಪಸಂಖ್ಯಾತ ವರ್ಗ ಎಂದೇ ಪರಿಗಣಿಸಬೇಕು. ಎರಡನೆಯದಾಗಿ ನಾನು ಹೇಳಬಯಸುವುದು ಬ್ರಿಟೀಷ್ ಭಾರತದ ಬೇರೆ ಯಾವುದೇ ಅಲ್ಪಸಂಖ್ಯಾತ ವರ್ಗಕ್ಕಿಂತ ನಿಮ್ನವರ್ಗಗಳ ಅಲ್ಪಸಂಖ್ಯಾತರಿಗೆ ಹೆಚ್ಚಿನ ರಾಜಕೀಯ ರಕ್ಷಣೆಯ ಅಗತ್ಯವಿದೆ. ಏಕೆಂದರೆ, ಈ ವರ್ಗ ವಿದ್ಯಾಭ್ಯಾಸದಲ್ಲಿ ತೀರ ಹಿಂದುಳಿದಿದೆ. ಆರ್ಥಿಕವಾಗಿ ಹೀನ ಸ್ಥಿತಿಯಲ್ಲಿದೆ. ಸಾಮಾಜಿಕವಾಗಿ ದಾಸ್ಯದಲ್ಲಿದೆ ಮತ್ತು ಬೇರೆ ಯಾವ ಜಾತಿಗೂ ಇಲ್ಲದ ಕೆಲವು ಗಂಭೀರ ವಾದ ರಾಜಕೀಯ ಅನುಕೂಲಗಳಿಂದ ನರಳುತ್ತಿದೆ. ಇದಲ್ಲದೆ ನಾನು ಹೇಳಬೇಕೆಂದಿರುವುದು ಮಹಮದೀಯ ಅಲ್ಪಸಂಖ್ಯಾತರು ರಾಜಕೀಯ ರಕ್ಷಣೆಗಾಗಿ ನೀಡುವ ಆಧಾರಗಳನ್ನೇ ನಾವೂ ನಮ್ಮ ರಾಜಕೀಯ ರಕ್ಷಣೆಗಾಗಿ ನೀಡುತ್ತೇವೆ. ವಯಸ್ಕ ಮತದಾನದ ಹಕ್ಕಿನೊಂದಿಗೆ ಮೀಸಲಾತಿ ಸ್ಥಾನಗಳಿಗಾಗಿ ನಾವು ಒತ್ತಾಯಿಸುತ್ತೇವೆ." ಎಂದು ವಾದ ಮಂಡಿಸಿ ಇತರೆ ಅಲ್ಪಸಂಖ್ಯಾತ ಸಮುದಾಯಗಳ್ ಅಂದರೆ ಮುಸ್ಲಿಂ, ಸಿಖ್, ಆಂಗ್ಲೋ ಇಂಡಿಯನ್ ಮಾದರಿಯಲ್ಲಿ ಅಸ್ಪೃಶ್ಯರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಪ್ರತ್ಯೇಕ ಚುನಾವಣಾ ಕ್ಷೇತ್ರಗಳಗಾಗಿ ಬೇಡಿಕೆ ಮಂಡಿಸುತ್ತಾರೆ. ಜೊತೆಗೆ ಈ ಸಮ್ಮೇಳನದಲ್ಲಿ ಅಂಬೇಡ್ಕರ್ ಅವರು ಜಾತಿ ಪ್ರಶ್ನೆಗಳ ಒಗಟುಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿ, ಈ ದೇಶದ ನಿಮ್ನವರ್ಗಗಳಿಗೆ ಅವರ ಉದ್ಧಾರಕ್ಕೆ 'ಪ್ರತ್ಯೇಕ ಮತದಾನ ಪದ್ಧತಿ ಮತ್ತು ಮೀಸಲಾತಿಯನ್ನು' ಪ್ರತಿಪಾದಿಸಿದರು. ಈ ಪ್ರತಿಪಾದನೆಗೆ ಬ್ರಿಟೀಷ್ ಸರ್ಕಾರ 1932ನೇ ಆಗಸ್ಟ್ 17 ರಂದು ಮತೀಯ ತೀರ್ಪಿನಲ್ಲಿ ನ್ಯಾಯ ದೊರಕಿಸಿ ಕೊಟ್ಟಾಗ ಇದನ್ನು ವಿರೋಧಿಸಿದ ಮಹಾತ್ಮ ಗಾಂಧೀಜಿ ಅವರು ಈ ಪ್ರತ್ಯೇಕ ಮತದಾನ ಪದ್ಧತಿಯು ಹಿಂದೂಧರ್ಮವನ್ನು ಸರ್ವನಾಶ ಮಾಡಲು ನೀಡಿರುವ

ರಹದಾರಿ ಎಂದು ಭಾವಿಸಿ ತಾವಿದ್ದ ಜೈಲಿನಲ್ಲೇ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಆದರೆ ಈ ಉಪವಾಸದ ತೀವ್ರತೆಗೆ ಕಟ್ಟು ಬಿದ್ದು ವಲ್ಲದ ಮನಸ್ಸಿನಿಂದ ಅಂಬೇಡ್ಕರ್ ಅವರು 24 ಸೆಪ್ಟೆಂಬರ್ 1932ರಲ್ಲಿ ಪೂನಾ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಇಂದಿನ ಸರಳ ಮೀಸಲಾತಿಗೆ ಸಮ್ಮತಿಸಿದರು. ಈ ಮೀಸಲಾತಿಯು ಅಂದಿನ 1911ರ ಜನಗಣತಿಯ ಆಧಾರದ ಮೇಲೆ ಶೇಕಡಾ 18ರಷ್ಟು ಲಭ್ಯವಾದರೂ ಕೂಡ ಅಸ್ಪೃಶ್ಯರ ವಿಮೋಚನೆಗೆ ಇದು ಇಂದಿಗೂ ಪ್ರಬಲ ಅಸ್ತ್ರವಾಗಲೇ ಇಲ್ಲ. ಪೂನಾ ಒಪ್ಪಂದದ ಮೂಲಕ ಮಹಾತ್ಮ ಗಾಂಧೀಜಿ ಅವರು ಹಿಂದೂಧರ್ಮದ ಐಕ್ಯತೆಯನ್ನು ಕಾಪಾಡಿಕೊಂಡರೋ ಇಲ್ಲವೋ. ಆದರೆ ಅಂಬೇಡ್ಕರ್ ಅವರ ಕನಸಿನ ಅಸ್ಪೃಶ್ಯರ ವಿಮೋಚನೆಯ ಹೋರಾಟಕ್ಕೆ ಹಿನ್ನಡೆ ಉಂಟಾಯಿತು. ಆ ಯಾವ ಧರ್ಮದ ಅಡಿಯಿಂದ ಅಸ್ಪೃಶ್ಯರನ್ನು ಹೊರತರ ಬೇಕೆಂದು ಹೋರಾಡುತ್ತಿದ್ದರೋ ಅದೇ ಧರ್ಮದಲ್ಲಿ ಅಸ್ಪೃಶ್ಯರನ್ನು ಚಮಚಾಗಳೋಪಾದಿಯಲ್ಲಿ ಉಳಿಸಿ ಕೊಳ್ಳುವಲ್ಲಿ ಮಹಾತ್ಮ ಗಾಂಧೀಜಿ ಅವರು ಯಶಸ್ವಿಯಾದರು.

ಯಾವ ಅಸ್ಪೃಶ್ಯರ ವಿಮೋಚನೆಗೆ ಮೀಸಲು ಕ್ಷೇತ್ರಗಳು ಅವಶ್ಯಕವೆಂದು ಭಾವಿಸಿದ್ದರೋ ಆ ಮೀಸಲಾತಿ ಪೂನಾ ಒಪ್ಪಂದದ ಅನಂತರ ಅಸ್ಪೃಶ್ಯರ ಏಳಿಗೆಗೆ ಯಾವುದೇ ಪೂರಕವಲ್ಲವೆಂದು ಭಾವಿಸಿದ ಅಂಬೇಡ್ಕರ್ ಅವರು ಅಸ್ಪೃಶ್ಯರ ವಿಮೋಚನೆಗಾಗಿ ಬೇರೆಯದೇ ಆದ ಮಾರ್ಗೋಪಾಯಗಳನ್ನು ಹುಡುಕಲು ಆರಂಭಿಸಿದರು. ಅದಕ್ಕಾಗಿ ತಮ್ಮದೇ ಆದ ದೃಷ್ಟಿಕೋನವನ್ನು ಹೊಂದಿದ್ದ "ಸ್ವತಂತ್ರ ಕಾರ್ಮಿಕ ಪಕ್ಷ"ವನ್ನು ಸ್ಥಾಪಿಸಿದರು. ಆ ಪಕ್ಷಕ್ಕೆ ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ, ರೈತ, ಕೂಲಿ ಹಾಗೂ ಕಾರ್ಮಿಕರ ಬೆಂಬಲ ಯಾಚಿಸಿದರು. ತರುವಾಯ 1942ರ ವೇಳೆಗೆ ನಿಮ್ನವರ್ಗಗಳಿಗಾಗಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟವನ್ನು ಸ್ಥಾಪಿಸಿದರು. ಈ ನಡುವೆ ಇವರ ಮುತ್ಸದ್ಧಿತನವನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ಇವರನ್ನು ತಮ್ಮ ವೈಸ್‌ರಾಯ್ ಕಾರ್ಯಕಾರಿ ಸಮಿತಿಗೆ ಕಾರ್ಮಿಕ ಖಾತೆಯ ಸದಸ್ಯರನ್ನಾಗಿ ನೇಮಿಸಿಕೊಂಡರು. 1946ರಲ್ಲಿ ಭಾರತಕ್ಕೆ ಬಂದ ಕ್ಯಾಬಿನೆಟ್ ಆಯೋಗದ ಶಿಫಾರಸ್ಸಿನಂತೆ ಭಾರತ ಸರ್ಕಾರವು 385 ಪ್ರತಿನಿಧಿಗಳ ಸಂವಿಧಾನ ರಚನಾ ಸಭೆಯು ಅಸ್ತಿತ್ವಕ್ಕೆ ಬಂತು. ಈ ನಡುವೆಯೇ ಪಾಕಿಸ್ತಾನ ವಿಭಜನೆಯಾದ್ದರಿಂದ ಸುಮಾರು 75 ಸ್ಥಾನಗಳು ಕಡಿಮೆಯಾದವು. ಆದರೂ ಅಂಬೇಡ್ಕರ್ ಅವರು ಸಂವಿಧಾನ ಸಭೆಗೆ ಆಯ್ಕೆಗೊಳ್ಳಲು ಬಾಂಬೆ ಪ್ರಾಂತ್ಯದಿಂದ ಸ್ಪರ್ಧಿಸಿದರು. ಆದರೆ ಪಟ್ಟ ಭದ್ರಹಿತಾಸಕ್ತಿಗಳ ಕುಟಿಲತೆಯಿಂದ ಸೋಲಬೇಕಾಯಿತು. ಕೊನೆಗೆ ಪೂರ್ವ ಬಂಗಾಳದಿಂದ ಶ್ರೀ ಮಂಡಲ ಎಂಬ ಪರಿಶಿಷ್ಟ ಜಾತಿಯ ಸದಸ್ಯರು ತಮ್ಮ ಸ್ಥಾನ ತೆರವುಗೊಳಿಸಿ ಅಂಬೇಡ್ಕರ್ ಅವರು ಆಯ್ಕೆಯಾಗಲು ಅವಕಾಶ ನೀಡಿದರು. ಹೀಗೆ ಆಯ್ಕೆಯಾಗಿ ಬಂದ ಅಂಬೇಡ್ಕರ್ ಅವರಿಗೆ ಕರಡು ರಚನಾ ಸಮಿತಿಯ ಅಧ್ಯಕ್ಷತೆ ದೊರಕಿ ತನ್ನ ಸಮುದಾಯದ ಏಳಿಗೆಗಾಗಿ ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು

ತಮ್ಮ ಕಾರ್ಯ ವ್ಯಾಪ್ತಿಯೊಳಗೆ ಅಸ್ಪೃಶ್ಯ ಸಮುದಾಯಗಳ ಕಲ್ಯಾಣಕ್ಕೆ ಶ್ರಮಿಸಿದರು. ಅದರಲ್ಲೂ ಪ್ರಸುತ್ತ ಇರುವ ನಮ್ಮ ಸಂವಿಧಾನ ನಿಜವಾಗಿಯೂ ಅಂಬೇಡ್ಕರ ಈ ದೇಶಕ್ಕೆ, ನಿಮ್ನವರ್ಗದವರಿಗೆ ನೀಡುವಂತಹುದಾಗಿರಲಿಲ್ಲ. ತಾನು ಕೊನೆ ಪಕ್ಷ ಸಂವಿಧಾನ ಕರಡು ರಚನಾ ಸಭೆಯಲ್ಲಿ ಇರದಿದ್ದರೆ ಇದನ್ನೂ ನೀಡಲಾಗುವುದಿಲ್ಲವೆಂದು ಭಾವಿಸಿ ತಮ್ಮೆಲ್ಲ ನೋವು, ಅವಮಾನ, ಸಂಕಟಗಳನ್ನು ಅದುಮಿಟ್ಟುಕೊಂಡು ಈ ದೇಶದ ಎಲ್ಲ ತುಳಿತಕ್ಕೊಳಗಾದವರು ಘನತೆಯಿಂದ ಬದುಕುವಂತಹ ಸಂವಿಧಾನವನ್ನು ಕೊಟ್ಟರು. ಒಂದು ವೇಳೆ ಅಂಬೇಡ್ಕರ್ ಅವರು ಏನಾದರೂ ಸಂವಿಧಾನ ರಚನಾ ಸಮಿತಿಯಲ್ಲಿರದಿದ್ದರೆ ಸಾಮಾಜಿಕ ನ್ಯಾಯ ಎನ್ನುವ ಪರಿಕಲ್ಪನೆಯೇ ಕನಸಾಗಿ ಉಳಿಯುತಿತ್ತು..

ಅಸಮಾನತೆ, ಅಸ್ಪ್ರಶ್ಯತೆ ಅಂದಕಾರ ಶೋಷಣೆಯ ವಿರುದ್ಧ ಅವಿರತ ಹೋರಾಟ ನಡೆಸಿದ ನವ ಭಾರತದ ನಿರ್ಮಾಪಕರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತದ ಹಿಂದುಳಿದ, ದಲಿತ ವರ್ಗಗಳ ವಿಮೋಚನೆಗಾಗಿ ಸಂವಿಧಾನದಲ್ಲಿ ಹಲವಾರು ಅವಕಾಶಗಳನ್ನು ಮಾಡಿಕೊಡುವ ಮೂಲಕ ಧ್ವನಿಯಿಲ್ಲದವರ ಧ್ವನಿಯಾದರು. ಆ ಮೂಲಕ ಸಾಮಾಜಿಕ ನ್ಯಾಯದ ಪ್ರತಿಪಾದಕರಾದರು. “ಅನ್ಯಾಯವನ್ನು ನಿರ್ಮೂಲನೆ ಮಾಡಬೇಕಾದರೆ, ಅದನ್ನು ಪ್ರತಿಭಟಿಸಲೇಬೇಕು. ಆದರೆ ಅನ್ಯಾಯವು ಒಂದು ಸಮೂಹದ ಅಧಿಕಾರ ಬಲದಿಂದ ಉಂಟಾಗುತ್ತಿರುವಾಗ – ಅದು ಸರ್ವಾಧಿಕಾರವಾಗಿರಬಹುದು ಅಥವಾ ಒಂದು ವರ್ಗದ ದಬ್ಬಾಳಿಕೆಯಾಗಿರಬಹುದು – ಅದನ್ನು ಅಧಿಕಾರ ಬಲದಿಂದಲೇ ಹಿಮ್ಮೆಟ್ಟಿಸಬೇಕು. ಅಧಿಕಾರ ಬಲದಿಂದ ಅನ್ಯಾಯವೆಸಗುವ ವರ್ಗದ ವಿರುದ್ಧ ಅಧಿಕಾರವನ್ನು ಪ್ರಯೋಗಿಸದಿದ್ದಲ್ಲಿ ಈ ವರ್ಗವನ್ನು ಕೆಳಗಿಳಿಸುವುದು ಅಸಾಧ್ಯ. ಶಕ್ತಿವಂತರಿಂದ ದುರ್ಬಲರ ಶೋಷಣೆಯನ್ನು ತಡೆಯಲು ಇದೊಂದೇ ಮಾರ್ಗವಾಗಿದೆ.” ಎನ್ನುವ ಮೂಲಕ ಅಧಿಕಾರಕ್ಕೆ ಸಮನಾದ, ಹಕ್ಕುಗಳಿಗೆ ಸಮನಾದ ಅವಕಾಶಗಳನ್ನು ಅಸ್ಪೃಶ್ಯರಿಗೆ ಮತ್ತು ಇತರೆ ಶೋಷಿತ ವರ್ಗದವರಿಗೆ ಸಂವಿಧಾನದಲ್ಲಿ ನೀಡಿದರು. ಅವುಗಳೆಂದರೆ;

1. ಹಿಂದೂಧರ್ಮಕ್ಕೇ ಕಪ್ಪು ಚುಕ್ಕೆಯಾಗಿದ್ದ “ಅಸ್ಪೃಶ್ಯತೆ”ಯ ಆಚರಣೆಯನ್ನು ಸಂವಿಧಾನದ ಅನುಚ್ಛೇದ 17ರ ಪ್ರಕಾರ ಕಾನೂನು ವಿರೋಧಿ ಎಂದು ಸಾರಲಾಯಿತು.
2. ಭಾರತದ ಸಂವಿಧಾನದ ಅನುಚ್ಛೇದ 21ರ ಪ್ರಕಾರ ಎಲ್ಲಾ ನಾಗರಿಕರಿಗೂ ಜೀವಿಸುವ ಹಕ್ಕು ಇದೆ ಎಂದು ಘೋಷಣೆ.
3. ಭಾರತದ ಸಂವಿಧಾನದ ಅನುಚ್ಛೇದ 46 ದೇಶದಲಿರುವ ಪರಿಶಿಷ್ಟ ಜಾತಿಗಳವರನ್ನು ಮತ್ತು ಪರಿಶಿಷ್ಟ ಪಂಗಡದವರನ್ನು ಎಲ್ಲಾ ರೀತಿಯ ಶೋಷಣಾ ವಿಧಾನಗಳಿಂದ ಮತ್ತು ಸಾಮಾಜಿಕ ಅನ್ಯಾಯದಿಂದ ರಕ್ಷಿಸಬೇಕು ಎಂದು ಆದೇಶಿಸಿದೆ.

4. ಅಸ್ಪೃಶ್ಯತೆಯನ್ನು ತಡೆಗಟ್ಟುವ ಉದ್ದೇಶದಿಂದಲೇ ನಾಗರಿಕ ರಕ್ಷಣಾ ಕಾಯ್ದೆ (ಪಿಸಿಆರ್) 1955 ಜಾರಿಗೆ ತರಲಾಯಿತು.
5. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಟ್ಟದಲ್ಲಿ ದಲಿತರಿಗೆ ಸರ್ಕಾರಿ ಉದ್ಯೋಗದಲ್ಲಿ, ಶಿಕ್ಷಣದಲ್ಲಿ ಮೀಸಲು ನೀಡಲಾಯಿತು.
6. ದಲಿತರು ಚುನಾವಣೆಗಳಿಗೆ ಸ್ಪರ್ಧಿಸಲು ಮೀಸಲು ಸ್ಥಾನಗಳನ್ನು ನಿರ್ಧರಿಸಲಾಯಿತು.
7. ದಲಿತರು ತಮಗೆ ಸರಿ ಕಂಡ ಯಾವುದೇ ಧರ್ಮವನ್ನು ಸ್ವೀಕರಿಸಲು ಅನುವು ಮಾಡಿಕೊಡಲಾಯಿತು.
8. ದಲಿತರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳನ್ನು ತಡೆಗಟ್ಟಲು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ-1989 ನಂತಹ ಕಠಿಣವಾದ ಕಾಯ್ದೆಗಳನ್ನು ಜಾರಿಗೆ ತರಲಾಯಿತು.

ಆದರೆ ಸ್ವತಂತ್ರ ಭಾರತದಲ್ಲಿ ಸಂವಿಧಾನ ಜಾರಿಗೊಂಡರೂ ದಲಿತ ಸಮೂದಾಯಗಳನ್ನು ಅಸ್ಪೃಶ್ಯತೆಗೆ, ದೌರ್ಜ್ಯನ್ಯಕ್ಕೆ ಗುರಿಪಡಿಸುವ ಪ್ರಕರಣಗಳು ಇಂದಿಗೂ ಕಡಿಮೆಯಾಗಿಲ್ಲ. ಈ ವರ್ಗಗಳ ಜನರು ಸ್ವಾಭಿಮಾನದ ಬದುಕಿಗಾಗಿ, ಶಿಕ್ಷಣ ಪಡೆಯುವುದು ಅತ್ಯಾವಶ್ಯಕವಾಗಿದೆ. "ಒಂದು ಸಮುದಾಯದ ಆರ್ಥಿಕ ಚಲನೆ ಮತ್ತು ಸಾಮಾಜಿಕ ಚಲನೆ ಎರಡೂ ಒಟ್ಟೊಟ್ಟಿಗೆ ಸಾಗುವುದೇ ಸಾಮಾಜಿಕ ನ್ಯಾಯದ ಅಂತಿಮಗುರಿ.' ಹಾಗಾಗಿಯೇ ಸಾಮಾಜಿಕ ನ್ಯಾಯ ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಅದು ಹಿಂದೂ ಸಮಾಜದ ಅಸಮಾನತೆಯನ್ನು ಅಮೂಲಾಗ್ರವಾಗಿ ನಿರ್ಮೂಲನೆ ಮಾಡುವುದೇ ಆಗಿತ್ತು. ಹಾಗಾಗಿಯೇ "ಯಾರೊಬ್ಬನೇ ಆಗಲಿ ತಾನು ಹುಟ್ಟಿದ ಧರ್ಮದಲ್ಲಿಯೇ ಅದು ಆತನ ಪೂರ್ವಿಕರದ್ದೆಂಬ ಕಾರಣಕ್ಕಾಗಿ ಉಳಿಯಬೇಕೆಂದು ಮೂರ್ಖನಾದವನು ಮಾತ್ರವೇ ಹೇಳಬಹುದು. ಆದರೆ ಯಾವೊಬ್ಬ ಪ್ರಜ್ಞಾವಂತ ವ್ಯಕ್ತಿಯು ಇಂತಹ ವಾದವನ್ನು ಒಪ್ಪಿಕೊಳ್ಳಲಾರ. ವರ್ತಮಾನದಲ್ಲಿ ನೀವು ಹೇಗಿರುವಿರೋ ಮುಂದೆಯೂ ಹಾಗೆಯೇ ಇರುವಿರಿ ಎಂಬ ಹೇಳಿಕೆ ಪ್ರಾಣಿಗಳಿಗೆ ಮಾತ್ರ ಸಲಹೆಯಾಗಬಹುದು. ಆದರೆ ಅದು ಮನುಷ್ಯರಿಗಂತೂ ಅಲ್ಲವೇ ಅಲ್ಲ. ಪ್ರಾಣಿಗೂ ಮನುಷ್ಯನಿಗೂ ನಡುವೆ ಇರುವ ವ್ಯತ್ಯಾಸವೆಂದರೆ ಮನುಷ್ಯ ಪಗ್ರತಿಯನ್ನು ಸಾಧಿಸಬಲ್ಲ. ಆದರೆ ಪ್ರಾಣಿಯಿಂದ ಸಾಧ್ಯವಿಲ್ಲ. ಯಾವುದೇ ಬದಲಾವಣೆಯಿಲ್ಲದೆ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲ. ಮತಾಂತರವು ಒಂದು ರೀತಿಯಲ್ಲಿ ಬದಲಾವಣೆ ಉಂಟುಮಾಡುವಂತಹದು ಎಂದು ಹೇಳಬಹುದು. ಯಾವುದೇ ಬದಲಾವಣೆಯಿಲ್ಲದೆ ಪ್ರಗತಿಯನ್ನು ಸಾಧಿಸಲಾಗದಿದ್ದರೆ (ಇಲ್ಲಿ ಬದಲಾವಣೆ ಎಂದರೆ ಮತಾಂತರ) ಸ್ಪಷ್ಟವಾಗಿ ಮತಾಂತರವು ಅವಶ್ಯಕವೆನಿಸುತ್ತದೆ. ಪ್ರಗತಿಪರ ವ್ಯಕ್ತಿಯ ಹಾದಿಯಲ್ಲಿ ಪೂರ್ವಿಕರ ಧರ್ಮವು ಅಡ್ಡಿಯಾಗಿರಲು ಸಾಧ್ಯವಿಲ್ಲ.

ಹೀಗಾಗಿ ಮಾನವನಿಗಾಗಿ ಧರ್ಮವೇ ವಿನಹ ಧರ್ಮಕ್ಕಾಗಿ ಮಾನವನಲ್ಲ. ಮಾನವೀಯ ನಡವಳಿಕೆ ಬೇಕೆಂದರೆ ನೀವು ಮತಾಂತರಗೊಳ್ಳಿ, ಸಂಘಟಿತರಾಗಲು ಮತಾಂತರಗೊಳ್ಳಿ, ಶಕ್ತರಾಗಲು ಮತಾಂತರಗೊಳ್ಳಿ, ಸಮಾನತೆಯನ್ನು ಪಡೆದುಕೊಳ್ಳಲು ಮತಾಂತರಗೊಳ್ಳಿ, ಸ್ವಾತಂತ್ರ್ಯಕ್ಕಾಗಿ ಮತಾಂತರಗೊಳ್ಳಿ, ನಿಮ್ಮ ಕೌಟುಂಬಿಕ ಜೀವನ ಸುಗಮಗೊಳ್ಳುವುದಕ್ಕಾದರೂ ಮತಾಂತರಗೊಳ್ಳಿ. ನಿಮ್ಮನ್ನು ಮಾನವರಂತೆ ನಡೆಸಿಕೊಳ್ಳದೆ ಇರುವ ಧರ್ಮದಲ್ಲಿ ನೀವೇಕೆ ಉಳಿದುಕೊಳ್ಳುತ್ತೀರಿ? ದೇವಾಲಯ ಪ್ರವೇಶಕ್ಕೆ ಯಾವ ಧರ್ಮ ನಿಮ್ಮನ್ನು ನಿಷೇಧಿಸಿ ದೆಯೋ ಆ ಧರ್ಮದಲ್ಲಿ ನೀವೇಕೆ ಇರಬೇಕು. ಒಂದು ಹುದ್ದೆಯನ್ನು ಗಳಿಸಿಕೊಳ್ಳಲು ಪ್ರಯತ್ನಿಸುವಾಗ ಯಾವ ಧರ್ಮ ನಿಮ್ಮನ್ನು ಅಡ್ಡಿಪಡಿಸುತ್ತದೋ ಆಧರ್ಮದಲ್ಲಿ ನೀವೇಕೆ ಇರಬೇಕು? ಪ್ರತಿಯೊಂದು ಹಂತದಲ್ಲೂ ಯಾವ ಧರ್ಮ ನಿಮ್ಮನ್ನು ಅಪಮಾನಕ್ಕೆ ಈಡುಮಾಡುತ್ತಿದೆಯೋ ಆ ಧರ್ಮದಲ್ಲಿ ವನೀವೇಕೆ ಇರಬೇಕು?ಒಬ್ಬ ವ್ಯಕ್ತಿಯೊಂದಿಗೆ ಇನ್ನೊಬ್ಬ ವ್ಯಕ್ತಿ ತೋರಿಸುವ ಮಾನವೀಯ ಧೋರಣೆಗಳನ್ನು ಯಾವ ಧರ್ಮ ನಿಷೇಧಿಸಿದೆಯೋ ಅದು ಧರ್ಮವಲ್ಲ. ಆದರೆ ಅದೊಂದು ಶಕ್ತಿಯ ಪ್ರದರ್ಶನವಷ್ಟೇ.ಯಾವ ಧರ್ಮದಲ್ಲಿ ಪ್ರಾಣಿಗಳ ಸ್ಪೃಶ್ಯತೆಗೆ ಒಪ್ಪಿಗೆ ನೀಡಿರುತ್ತದೆಯೋ ಮತ್ತು ಮಾನವ ಸ್ಪೃಶ್ಯತೆಯನ್ನು ನಿಷೇಧಿಸಿದೆಯೋ ಅದು ಧರ್ಮವಲ್ಲ. ಅದೊಂದು ಧರ್ಮದ ಅಪಹಾಸ್ಯವಾಗಿದೆ. ಯಾವ ಧರ್ಮ ಒಂದು ವರ್ಗವನ್ನು ಶಿಕ್ಷಣದಿಂದ ದೂರವಿರಿಸುತ್ತಿದೆಯೋ, ಹಣಗಳಿಸುವುದಕ್ಕೂ ಮತ್ತು ಶಸ್ತ್ರಾಸ್ತ್ರಗಳನ್ನು ಹೊಂದುವುದಕ್ಕೂ ನಿಷೇಧಿಸುತ್ತಿದೆಯೋ ಅದು ಧರ್ಮವಲ್ಲ. ಆದರೆ ಅದೊಂದು ಮನುಷ್ಯನನ್ನು ಅಪಹಾಸ್ಯಕ್ಕೆ ಈಡುಮಾಡುತ್ತದೆಯಷ್ಟೇ. ಯಾವ ಧರ್ಮ ಅಜ್ಞಾನಿಗಳು ಅಜ್ಞಾನಿಗಳಾಗಿರಬೇಕೆಂದು ಮತ್ತು ಬಡವರು ಬಡವರಾಗಿರಬೇಕೆಂದು ಒತ್ತಾಯಿಸುತ್ತದೆಯೋ ಅದು ಧರ್ಮವಲ್ಲ. ಆದರೆ ಅದೊಂದು ಶಿಕ್ಷೆಯಾಗುತ್ತದೆ." ಎನ್ನುವ ಮೂಲಕ ನನ್ನ ಚಳುವಳಿಯ ಉದ್ದೇಶ ಎಲ್ಲಾ ಶೋಷಿತರಿಗೂ ಸಮಾನತೆ ಕಲ್ಪಿಸುವುದು. ನಿಮ್ಮ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ ಚಮ್ಮಾರ್, ಮಹರ್ ಎನ್ನುವ ಭೇದವಿಲ್ಲದೆ ಶಾಸನಸಭೆಗಳಿಗೆ ನಮ್ಮ ಸಮುದಾಯಗಳಿಂದ ಸಮರ್ಥ ಪ್ರತಿನಿಧಿಗಳನ್ನು ಗೆಲ್ಲಿಸಿ ಕಳಿಸುವುದು ನಿಮ್ಮ ಜವಾಬ್ದಾರಿಯಲ್ಲವೆ? ನನ್ನಂತಹ ಓರ್ವ ವ್ಯಕ್ತಿ ಮಹರ್ ಸಮುದಾಯದಲ್ಲಿ ಹುಟ್ಟಿರುವುದು ನಿಮ್ಮ ಪುಣ್ಯ. ಅಂತಹ ಸಮರ್ಥರು ಮತ್ತು ಶೋಷಿತರ ಹಿತಗಳನ್ನು ಕಾಪಾಡುವಂತಹ ಶಕ್ತರು ಚಮ್ಮಾರ್ ಸಮುದಾಯದಲ್ಲಿ ಇರುವುದಾದರೆ ಮುಂದೆ ಬರಲಿ, ನಾನು ನನ್ನ ಸ್ಥಾನವನ್ನು ತೆರವುಗೊಳಿಸಿ ಅವರಿಗೆ ಸಹಕರಿಸಲು ಸಿದ್ಧನಿದ್ದೇನೆ. ಆದರೆ ಅಂತಹ ವ್ಯಕ್ತಿಗಳು ಎಂದೆಂದಿಗೂ ಮೇಲ್ವರ್ಗದ ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಗಳಾಗದಂತೆ ಮತ್ತು ಅವರು ಬ್ರಾಹ್ಮಣೇತರರ ವಿರುದ್ಧ ನಿಮ್ಮನ್ನು ಬಳಸಿ ತಮ್ಮ ಶಕ್ತಿಯನ್ನು ಕಾಪಾಡಿಕೊಳ್ಳದಂತೆ ನೋಡಿ ಕೊಳ್ಳಬೇಕೆಂದು ನಾನು ನಿಮ್ಮನ್ನು ಎಚ್ಚರಿಸಲಿಚ್ಚಿಸುತ್ತೇನೆ. ಹಿಂದೂ ಸಂಘಟನಾವಾದಿಗಳನ್ನು ಎಂದೆಂದಿಗೂ ನಂಬಬೇಡಿ. ಅವರು ಪ್ರವರ್ಧಮಾನಕ್ಕೆ ಬರುತ್ತಿರುವ

ಮುಸಲ್ಮಾನರ ಒತ್ತಡವನ್ನು ಹತ್ತಿಕ್ಕುವ ಸಲುವಾಗಿ ನಿಮ್ಮನ್ನು ಛೂ ಬಿಡುತ್ತಾರೆ. ಶಿಕ್ಷಣವೊಂದೇ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲಾರದು.ಮಾತು, ಕೃತಿ ಮತ್ತು ಚಿಂತನೆಗಳಲ್ಲಿ ನಾವು ಒಂದು ಪ್ರಭಾವಶಾಲಿ ಧೋರಣೆಯ ಮೂಲಕ ಇನ್ನೆಂದೂ ಅವಮಾನ ಮತ್ತು ಅಸಮರ್ಥತೆಗಳನ್ನು ಸಹಿಸಲು ಸಿದ್ಧರಿಲ್ಲವೆಂಬುದನ್ನು ತೋರಿಸದಿದ್ದರೆ ನಾವು ಏನನ್ನೂ ಸಾಧಿಸಲಾಗುವುದಿಲ್ಲ." ಎನ್ನುವ ಮೂಲಕ ಜಗತ್ತಿನ ಅತಿ ಪ್ರಾಚೀನ ಮಾನವೀಯ ಧರ್ಮವಾದ ಬೌದ್ಧಧರ್ಮವನ್ನು ಅಪ್ಪಿಕೊಳ್ಳಲು ಮುಂದಾದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಪತ್ನಿಯೊಂದಿಗೆ ಅಕ್ಟೋಬರ್ 14, 1956ರಂದು ನಾಗಪುರದ ದೀಕ್ಷಾ ಭೂಮಿಯಲ್ಲಿ ಲಕ್ಷಾಂತರ ಶೋಷಿತ ಜನರೊಡನೆ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದರು. ದಲಿತರ ವಿಮೋಚನೆ ಧಮ್ಮಾಂತರದಿಂದ ಮಾತ್ರ ಸಾಧ್ಯ ಎಂದು ಸಾರುವ ಮೂಲಕ ಅಸ್ಪೃಶ್ಯ ಸಮುದಾಯಕ್ಕೆ ಹೊಸ ಸಂದೇಶ ನೀಡಿದರು. ಹೀಗೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಜಾತಿ ವಿರುದ್ಧವಾಗಿ ಹೋರಾಟ ನಡೆಸುವ ಮೂಲಕ ನಾನು ಹಿಂದುವಾಗಿ ಹುಟ್ಟಿದೇನೆ ಆದರೆ ಹಿಂದೂವಾಗಿ ಸಾಯಲಾರೆ ಎನ್ನುವಂತಹ ಮಾತುಗಳು ಪ್ರಸ್ತುತದಲ್ಲಿಯೂ ಕೂಡ ತಳಸಮುದಾಯಗಳನ್ನು ಎಚ್ಚರಿಸುವಂತದ್ದಾಗಿದೆ.ಇದನ್ನು ಅರಿತು ತಳಸಮುದಾಯಗಳು ಮುನ್ನಡೆಯ ಬೇಕಾಗಿದೆ. ಜಾತಿ ವ್ಯವಸ್ಥೆಯ ಕಠೋರತೆಯೂ ಸಹ ತಳಸಮುದಾಯಗಳ ಕನಸುಗಳನ್ನು ನುಚ್ಚುನೂರು ಮಾಡಿದೆ. ಮೇಲು ವರ್ಗದವರ ಮುಂದೆ ಉತ್ತಮ ಉಡುಗೆ ತೊಡದೆ, ಕುದುರೆ ಏರದೆ.ಉನ್ನತ ಹುದ್ದೆಯನ್ನು ಅಲಂಕರಿಸದೇ, ವಿಜ್ರಂಬಿಸದೇ, ಮೇಲುವರ್ಗದ ಹೆಣ್ಣುಮಕ್ಕಳನ್ನು ಪ್ರೀತಿಸಿದರೆ ಜೀವಭಯದ ವಾತಾವರಣದಲ್ಲಿ ಮಾರ್‍ಯಾದೇ ಹತ್ಯೆಯಲ್ಲಿ ಅಂತ್ಯ ಕಾಣಬೇಕಾಗುತ್ತದೆ. ಇಲ್ಲಿ ಬುದ್ಧನ ಪ್ರೀತಿ, ಬಸವಣ್ಣ ಸಮಾನತೆ, ಅಂಬೇಡ್ಕರ್ ಅವರ ಸ್ವಾಭಿಮಾನದ ಸ್ವಾತಂತ್ರ್ಯ ಚಿಂತನೆಗಳನ್ನು ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಮಣ್ಣುಪಾಲು ಮಾಡಿದೆ.

**ಪರಾಮರ್ಶನ ಗ್ರಂಥಗಳು**.

1. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು (ಸಂ–1), ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, 2015
2. ಸೋಮಶೇಖರ್. ಜೆ, ನರೇಂದ್ರಕುಮಾರ್.ಎಸ್, ಅಭಿಮುಖಿ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, 2005

3. ಎಸ್.ನರೇಂದ್ರಕುಮಾರ್, ಹೊಸ ಸಮಾಜ ಮತ್ತು ಅಂಬೇಡ್ಕರ್, ಈಶ್ವರಿ ಪ್ರಕಾಶನ ಮೈಸೂರು, 2002
4. ಡಾ.ಪುನ್ನೆಪ್ಪ ಎಸ್. ಮಾಳ್ಗೆ, ಬಸವೇಶ್ವರ ಮತ್ತು ಅಂಬೇಡ್ಕರ್ ಅವರ ರಾಜಕೀಯ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯ, ರಾಜ್ ಪ್ರಕಾಶನ, ಮೈಸೂರು, 2004
5. ವೀರಣ್ಣ. ಸಿ. ಸಾಹಿತ್ಯ ಮತ್ತು ಸಮುದಾಯ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, 1983